ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಉದ್ದೇಶಿಸಿರುವ GIS ಆಧಾರಿತ ಪ್ರಸ್ತಾಪಿತ ರಸ್ತೆ ಪರಿಚಲನಾ ಜಾಲದ ನಕ್ಷೆಗಳಿಗೆ (Road Network Grid Plan) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ13(1) ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 11.05.2025 ಮತ್ತು 18.05.2025 ರಂದು ನಡೆದ ಸಭೆಯ ನಡವಳಿಗಳು.
2. ಸರ್ಕಾರದ ಆದೇಶ ಸಂಖ್ಯೆ: ನಅಇ 504 ಬೆಂಆಸೇ 2004, ದಿನಾಂಕ 25.06.2007.
3. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಪತ್ರ ಸಂಖ್ಯೆ: ಮು.ಆ/ಜಿಬಿಎ/ಪಿಆರ್/304/2026-27, ದಿನಾಂಕ 07.09.2026.

****

ಪ್ರಸ್ತಾವನೆ

ಮೇಲೆ ಓದಲಾದ ಉಲ್ಲೇಖ (1) ರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳಲ್ಲಿ ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ Mobility Plan ಸಿದ್ಧಪಡಿಸುವಂತೆ ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ (2) ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರಡಿ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2015 ಗೆ ಅಂತಿಮ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಉಲ್ಲೇಖ (3) ರಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮಹಾಯೋಜನೆಯಲ್ಲಿನ ಹಾಲಿ ರಸ್ತೆ ಜಾಲಕ್ಕೆ ಪೂರಕವಾಗಿ, ಬೆಂಗಳೂರು ನಗರದ ಭವಿಷ್ಯದ ಬೆಳವಣಿಗೆ, ಸಂಚಾರ ದಟ್ಟಣೆ ನಿವಾರಣೆ, ಸಂಪರ್ಕ ವ್ಯವಸ್ಥೆಯ ಸುಧಾರಣೆ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳ ವಿಸ್ತರಣೆಗೆ ಅನುಕೂಲವಾಗುವಂತೆ ಅಗತ್ಯವಿರುವ ಜಾಗಗಳಲ್ಲಿ ಹೆಚ್ಚುವರಿಯಾಗಿ ಹಾಲಿ ಇರುವ ರಸ್ತೆಗಳನ್ನು ಪರಿಗಣಿಸಿ ಪ್ರಸ್ತಾಪಿಸಿರುವ ವಿವಿಧ ಅಗಲಗಳ ರಸ್ತೆಗಳನ್ನು ಒಳಗೊಂಡಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12(1) (ಬಿ) ರನ್ವಯ ಕ್ರಮವಹಿಸಿ ರಸ್ತೆ ಪರಿಚಲನಾ ಜಾಲದ (Road Network Grid Plan) ನಕ್ಷೆಗಳನ್ನು ತಯಾರಿಸಿರುವುದಾಗಿ ವರದಿ ನೀಡಲಾಗಿದೆ ಹಾಗೂ ಅದರಂತೆ ತಯಾರಿಸಿರುವ ನಕ್ಷೆಗಳನ್ನು ಪರಿಷ್ಕೃತ ಮಹಾಯೋಜನೆಯಲ್ಲಿ (RMP-2015) ಅಳವಡಿಸಿಕೊಳ್ಳಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ನಡವಳಿ (ಅಂತಿಮ) 1050/26-27

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ: 10/09/26

ಸರ್ಕಾರದ ಆದೇಶ ಸಂಖ್ಯೆ: ನಅಇ 597 ಎಂಎನ್‌ಜೆ 2026(ಇ), ದಿನಾಂಕ: 09-09-2026

e-623551

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅಳವಡಿಸಲು ಪ್ರಸ್ತಾಪಿಸಲಾದ GIS ಆಧಾರಿತ ರಸ್ತೆ ಪರಿಚಲನಾ ಜಾಲವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12(1)(ಬಿ) ರನ್ವಯ ಅಳವಡಿಸಿಕೊಳ್ಳಲು ಪ್ರಸ್ತಾಪಿತ ರಸ್ತೆ ಪರಿಚಲನಾ ಜಾಲದ ನಕ್ಷೆಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ

PS4 16/9

16/9

ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

1. ಪ್ರಸ್ತಾಪಿಸಿರುವ ರಸ್ತೆ ಪರಿಚಲನೆಯು ಬಾಲ್ತಿಯಲ್ಲಿರುವ ಅನುಮೋದಿತ ಮಹಾಯೋಜನೆಯ (RMP-2015) ಹಾಲಿ ಮತ್ತು ಪ್ರಸ್ತಾಪಿತ ರಸ್ತೆಗಳೊಂದಿಗೆ ಯೋಜನಾಬದ್ಧವಾಗಿ ಜೋಡಣೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
2. ಪ್ರಸ್ತಾಪಿಸಲಾದ ರಸ್ತೆ ಪರಿಚಲನೆಯು ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿ ಹೊಂದಿಕೊಂಡಂತೆ ಇರುವ ಇತರೆ ಯೋಜನಾ ಪ್ರಾಧಿಕಾರಗಳ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮೈಸೂರು-ಇನ್‌ಫ್ರಾಸ್ಟ್ರಕ್ಚರ್ ಪ್ರದೇಶ ಯೋಜನಾ ಪ್ರಾಧಿಕಾರ) ಪ್ರಸ್ತಾಪಿತ ರಸ್ತೆ ಜಾಲಗಳೊಂದಿಗೆ ಹೊಂದಾಣಿಕೆಯಾಗುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
3. ಸದರಿ ಪ್ರಸ್ತಾವನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(3) ರನ್ವಯ ಸರ್ಕಾರದ ಅಂತಿಮ ಅನುಮೋದನೆ ಪಡೆದು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಅಭಿವೃದ್ಧಿಗಳಿಗೆ ಅನುಮತಿಸುವಾಗ ಪ್ರಸ್ತಾಪಿತ ರಸ್ತೆ ಜಾಲವನ್ನು ಅಳವಡಿಸಿಕೊಂಡು ಅನುಮೋದನೆಗಳನ್ನು ನೀಡತಕ್ಕದ್ದು.

ಪ್ರಸ್ತಾಪಿತ ರಸ್ತೆ ಪರಿಚಲನಾ ನಕ್ಷೆಗಳಿಗೆ ಅನುಮೋದನೆ ನೀಡಿದ ಗುರುತಾಗಿ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1)(2) ರನ್ವಯ ಕ್ರಮ ಕೈಗೊಂಡು ಪ್ರಸ್ತಾಪಿತ ರಸ್ತೆ ಪರಿಚಲನಾ ಜಾಲದ ನಕ್ಷೆಗಳನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
Digitally signed by
RAJESH S SULIKERI
Date: 09-09-2026
20:44:16
(ರಾಜೇಶ್ ಎಸ್ ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ
(ಬಿ.ಡಿ.ಎ ಮತ್ತು ಬೆಂ-1)

ಇವರಿಗೆ: -

ಸಂಕಲನಾಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು- ಇವರಿಗೆ ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವಂತೆ ಕೋರಿದೆ.

ಪ್ರತಿಯನ್ನುಮುಂದಿನಕ್ರಮಕ್ಕಾಗಿ:-

1. ಮುಖ್ಯ ಆಯುಕ್ತರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ.
2. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.
3. ಮಹಾನಗರ ಆಯುಕ್ತರು, ಬಿ.ಎಂ.ಆರ್.ಡಿ.ಎ.
4. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿನ 05 ನಗರ ಪಾಲಿಕೆಗಳ ಆಯುಕ್ತರು- ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖಾಂತರ.
5. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು.
6. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.
7. ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ.
8. ಸದಸ್ಯ-ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೩ Part – III	ಬೆಂಗಳೂರು, **ಸೋಮವಾರ,** ೧೨, ಅಕ್ಟೋಬರ್, ೨೦೨೬ (ಆಶ್ವಯುಜ , ೨೦, ಶಕವರ್ಷ, ೧೯೪೮) BENGALURU, MONDAY, 12, OCTOBER, 2026 (AASHWAYUJA , 20, SHAKAVARSHA, 1948)	ನಂ. ೧೧೩೩ No. 1133

GREATER BENGALURU AUTHORITY

Office of the Chief Commissioner, NR Square, Bengaluru -560002.

No: CC/GBA/PR/304/2026-27 Dated:12-10-2026.

NOTIFICATION

Sub:	Regarding Road Circulation Network to be implemented in the Local Planning Area of the Greater Bengaluru Authority.

(Under Section 13(1) of Karnataka Town and Country Planning Act, 1961)

It is hereby notified for the information of the general public that, under Section 13(1) of the Karnataka Town and Country Planning Act, 1961, Government vide Order No. NaAE 597 MNJ 2026 (E), Dated:09-09-2026, has approved the proposed road circulation pattern maps to be adopted under Section 12(1)(b) of the Karnataka Town and Country Planning Act, 1961, extending up to the boundary of the Local Planning Area of the Greater Bengaluru Authority. Hence, the provisionally approved maps indicating the approved Road Circulation Pattern are at the office of the respective City Corporation's Additional Chief Town Planner (Town Planning) for public information and public may submit their Suggestions / Objections in writing to the Office of the Chief Town Planner, NR Square, Bengaluru -560002 in person or through registered post, or by email at gba.masterplan@gmail.com within 60 days from the date of publication of this notification.

Sd/-
Chief Commissioner,
Greater Bengaluru Authority
Bengaluru

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಗ್ರೇಟರ್ ಬೆಂಗಳೂರು ಪ್ರಾಧಿಕಾರ
GREATER BENGALURU AUTHORITY
ಮುಖ್ಯ ಆಯುಕ್ತರು, ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-560002.

ಸಂಖ್ಯೆ: ಮು.ಆ/ಗ್ರೇ.ಬೆಂ.ಪ್ರಾ/ಪಿಆರ್/304/2026-27, ದಿನಾಂಕ:12-10-2026.

ಅಧಿಸೂಚನೆ

ವಿಷಯ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಅಳವಡಿಸಲಾಗುವ ರಸ್ತೆ ಪರಿಚಲನಾ ಜಾಲದ ಬಗ್ಗೆ.

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರಡಿಯಲ್ಲಿ)

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಘೋಷಿಸುವುದೇನೆಂದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಗಡಿಯವರೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12(1)(ಬಿ) ರನ್ವಯ ಅಳವಡಿಸಿಕೊಳ್ಳಲು ಪ್ರಸ್ತಾಪಿಸಲಾಗಿರುವ ರಸ್ತೆ ಪರಿಚಲನಾ ಜಾಲದ ನಕ್ಷೆಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ಕೆಲವೊಂದು ಷರತ್ತುಗಳಿಗೊಳಪಟ್ಟು ಸರ್ಕಾರವು ಆದೇಶ ಸಂಖ್ಯೆ ನಅಇ 597 ಎಂ.ಎನ್.ಜೆ 2026 (ಇ), ದಿನಾಂಕ 09-09-2026 ರಂದು ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಅನುಮೋದಿತ ರಸ್ತೆ ಪರಿಚಲನಾ ಜಾಲವನ್ನು ಗುರುತಿಸಿರುವ ನಕ್ಷೆಗಳು ಸಾರ್ವಜನಿಕರ ಮಾಹಿತಿಗಾಗಿ ಹಾಗೂ ವೀಕ್ಷಣೆಗೆ ಸಂಬಂಧಪಟ್ಟ ಆಯಾಯ ನಗರ ಪಾಲಿಕೆಯ ಅಪರ ಮುಖ್ಯ ನಗರ ಯೋಜಕರು, ನಗರ ಯೋಜನೆ ರವರ ಕಛೇರಿಯಲ್ಲಿ ಲಭ್ಯವಿದ್ದು ಸದರಿ ವಿಷಯದ ಕುರಿತು ಸಾರ್ವಜನಿಕರು ತಮ್ಮ ಸಲಹೆ / ಆಕ್ಷೇಪಣೆಗಳನ್ನು ಲಿಖಿತವಾಗಿ ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-560002 ಇವರಿಗೆ ಖುದ್ದಾಗಿ / ನೊಂದಾಯಿತ ಅಂಚೆ ಮೂಲಕ ಅಥವಾ ಇ-ಮೇಲ್ gba.masterplan@gmail.com ಮುಖಾಂತರ ಪ್ರಕಟಣೆಯಾದ ದಿನಾಂಕದಿಂದ 60 ದಿನಗಳ ಅವಧಿಯೊಳಗೆ ಸಲ್ಲಿಸಲು ತಿಳಿಸಲಾಗಿದೆ.

ಸಹಿ/-
ಮುಖ್ಯ ಆಯುಕ್ತರು,
ಗ್ರೇಟರ್ ಬೆಂಗಳೂರು ಪ್ರಾಧಿಕಾರ,
ಬೆಂಗಳೂರ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU Digitally signed by P S BASAVARAJU Date: 2026.10.12 19:25:20 +05'30'

ಗ್ರೇಟರ್ ಬೆಂಗಳೂರು ಪ್ರಾಧಿಕಾರ

ಮುಖ್ಯ ಆಯುಕ್ತರು ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-560002.

ನಂ. ಮು.ಆ/ಗ್ರೇ.ಬೆಂ.ಪ್ರಾ/ಪಿಆರ್/304/2026-27 ದಿನಾಂಕ : 12.10.2026

ಅಧಿಸೂಚನೆ

ವಿಷಯ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಅಳವಡಿಸಲಾಗುವ ರಸ್ತೆ ಪರಿಚಲನಾ ಜಾಲದ ಬಗ್ಗೆ.

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರಡಿಯಲ್ಲಿ)

ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಘೋಷಿಸುವುದೇನೆಂದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಗಡಿಯವರೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 12(1)(ಬಿ) ರನ್ವಯ ಅಳವಡಿಸಿಕೊಳ್ಳಲು ಪ್ರಸ್ತಾಪಿಸಲಾಗಿರುವ ರಸ್ತೆ ಪರಿಚಲನಾ ಜಾಲದ ನಕ್ಷೆಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ಕೆಲವೊಂದು ಪರತ್ತುಗಳಿಗೊಳಪಟ್ಟು ಸರ್ಕಾರವು ಆದೇಶ ಸಂಖ್ಯೆ ನಅಇ 597 ಎಂ.ಎನ್.ಜೆ 2026 (ಇ), ದಿನಾಂಕ: 09-09-2026 ರಂದು ತಾತ್ಕಾಲಿಕ ಅನುಮೋದನೆ ನೀಡಿರುತ್ತದೆ. ಅನುಮೋದಿತ ರಸ್ತೆ ಪರಿಚಲನಾ ಜಾಲವನ್ನು ಗುರುತಿಸಿರುವ ನಕ್ಷೆಗಳು ಸಾರ್ವಜನಿಕರ ಮಾಹಿತಿಗಾಗಿ ಹಾಗೂ ವೀಕ್ಷಣೆಗೆ ಸಂಬಂಧಪಟ್ಟ ಆಯಾಯ ನಗರ ಪಾಲಿಕೆಯ ಅಪರ ಮುಖ್ಯ ನಗರ ಯೋಜಕರು, ನಗರ ಯೋಜನೆ ರವರ ಕಛೇರಿಯಲ್ಲಿ ಹಾಗೂ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವೆಬ್‌ಸೈಟ್ updates.bbmp.gov.in/public ರಲ್ಲಿ ಲಭ್ಯವಿದ್ದು ಸದರಿ ವಿಷಯದ ಕುರಿತು ಸಾರ್ವಜನಿಕರು ತಮ್ಮ ಸಲಹೆ / ಆಕ್ಷೇಪಣೆಗಳನ್ನು ಲಿಖಿತವಾಗಿ ಮುಖ್ಯ ನಗರ ಯೋಜಕರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-560002 ಇವರಿಗೆ ಖುದ್ದಾಗಿ/ನೋಂದಾಯಿತ ಅಂಚೆ ಮೂಲಕ ಅಥವಾ ಇ-ಮೇಲ್ gba.masterplan@gmail.com ಮುಖಾಂತರ ಪ್ರಕಟಣೆಯಾದ ದಿನಾಂಕದಿಂದ 60 ದಿನಗಳ ಅವಧಿಯೊಳಗೆ ಸಲ್ಲಿಸಲು ತಿಳಿಸಲಾಗಿದೆ

ಸಹಿ/- ಮುಖ್ಯ ಆಯುಕ್ತರು, ಜಿಬಿಎ.

GREATER BENGALURU AUTHORITY

Office of the Chief Commissioner, NR Square, Bengaluru -560002

No CC/GBA/PR/304/2026-27 **Dated:12-10-2026**

NOTIFICATION

Sub : Regarding Road Circulation Network to be implemented in the Local Planning Area of the Greater Bengaluru Authority.
(Under Section 13(1) of Karnataka Town and Country Planning Act, 1961)

It is hereby notified for the information of the general public that, under Section 13(1) of the Karnataka Town and Country Planning Act, 1961, Government vide Order No. NaAE 597 MNJ 2026 (E), Dated:**09-09-2026**, has approved the proposed road circulation pattern maps to be adopted under Section 12(1)(b) of the Karnataka Town and Country Planning Act, 1961, extending up to the boundary of the Local Planning Area of the Greater Bengaluru Authority. Hence, the provisionally approved maps indicating the approved Road Circulation Pattern are at the office of the respective City Corporation's Additional Chief Town Planner (Town Planning) and on the Greater Bengaluru Authority website at **updates.bbmp.gov.in/public** for public information and public may submit their Suggestions / Objections in writing to the Office of the Chief Town Planner, NR Square, Bengaluru -560002 in person or through registered post, or by email at **gba.masterplan@gmail.com** within 60 days from the date of publication of this notification.

Sd/- Chief Commissioner, GBA.